ಮೂ. ದಾ. ನಂ. 93/2023

ಪಿ.ಡಬ್ಲ್ಯು.1

(ಇಂದು ದಿನಾಂಕ 20-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದಃ**

ಹಣದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ಹಾಗೂ ಪ್ರತಿವಾದಿಯ ನಡುವೆ ವಾಟ್ಸಪ್ ಮೂಲಕ ಮೇಸೆಜ ಕಳುಹಿಸಿರುತ್ತೇನೆ ಎಂದರೆ ಸರಿ. ನನ್ನ ಮೊಬೈಲ್ ನಂ. 9769395693 ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ವಾದಿ ಹಾಗೂ ಪ್ರತಿವಾದಿಯ ನಡುವೆ ಆದ ವಾಟ್ಸಪನ ಸಂದೇಶದ 3 ಪುಟಗಳಿರುವ ಪ್ರತಿಯಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿ.ಡಿ. 1 ಎಂದು ಗುರುತಿಸಲಾಯಿತು. ನಿ.ಡಿ. 1 ರಲ್ಲಿ ಒಂದು ಲೆಕ್ಕಪತ್ರದ ಚೀಟಿಯ ಫೋಟೋವನ್ನು ನಾನು ಪ್ರತಿವಾದಿಗೆ ಕಳುಹಿಸಿದ್ದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ನಿ.ಡಿ. 1 ನ್ನು ತೋರಿಸಿ ಅದರಲ್ಲಿ ದಿಃ 19-09-2022 ರಂದು ನನಗೆ 2 ಲಕ್ಷ ನಗದು ಹಣ ಸಿಕ್ಕಿರುವ ಬಗ್ಗೆ ಹಾಗೂ ದಿಃ 10-07-2023 ರಂದು ನಾನು ಕೈ ಬರವಣಿಗೆ ಮಾಡಿದ ಚೀಟಿಯ ಫೋಟೋವನ್ನು ವಾಟ್ಸಪ್ ಮುಖಾಂತರ ಪ್ರತಿವಾದಿಗೆ ಕಳುಹಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ನನಗೆ ಯಾವುದೇ ಹಣ ನೀಡಲು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಪಾವತಿಸಬೇಕಾದ ಎಲ್ಲ ಹಣವನ್ನು ಪಾವತಿ ಮಾಡಿದ್ದರು ಸಹ ಆತನ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ